## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ತರೀಕೆರೆ

## ಸಿ.ಸಿ.ನಂ.1246/2023

ಚಾಸಾ:6 ಪ್ರಾಸಾ: 7

ದಿನಾಂಕಃ 25.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರು– ಅಣ್ಣಪ್ಪ ನಾಯ್ಕ

ತಂದೆಯ ಹೆಸರು– ಮೂರ್ತಿ ನಾಯ್ಕ

ವಯಸ್ಸು – 33 ವರ್ಷ

ಉದ್ಯೋಗ– ಪೇದೆ, ಲಕ್ಕವಳ್ಳಿ ಪೋಲೀಸ್ ಠಾಣೆ

ವಾಸ– ತರೀಕೆರೆ

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

**1.** ನಾನು ದಿನಾಂಕ 20.03.2018 ರಿಂದ 25.07.2024 ರವರೆಗೆ ನಾನು ತರೀಕೆರೆ ಪೋಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ಈ ಪ್ರಕರಣದಲ್ಲಿ ದಿಃ 20–09–2022 ರಂದು ಸಂಜೆ 5–30 ರ ಸಮಯದಲ್ಲಿ ನಾನು ಠಾಣೆಯಲ್ಲಿ ಇರುವಾಗ ಭಾತ್ಮೀದಾರರಿಂದ ಚಾಸ–1 ರವರಿಗೆ ನಮ್ಮ ಠಾಣಾ ವ್ಯಾಪ್ತಿಯ ಹಳಿಯೂರು ಗ್ರಾಮದಲ್ಲಿ ಅಕ್ರಮವಾಗಿ ಗಂಗಾಧರ ಎಂಬ ವ್ಯಕ್ತಿಯು ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿ ಬಂದ ಮೇರೆಗೆ ಚಾಸ–1 ರವರು ನನ್ನನ್ನು ಮತ್ತು ಚಾ.ಸಾ–4 ಮತ್ತು 5 ರವರನ್ನು ಕರೆದುಕೊಂಡು ಇಲಾಖಾ ವಾಹನದಲ್ಲಿ ಭಾತ್ಮಿ ಬಂದ ಸ್ಥಳದ ಕಡೆಗೆ ಹೊರಟೆದರು. ರೈಲ್ವೇ ಗೇಟ್ ಹತ್ತಿರ ಚಾಸಾ–2 ಮತ್ತು 3 ಇವರನ್ನು ಬರಮಾಡಿಕೊಂಡಡು ಪಂಚರಾಗುವಂತೆ ತಿಳಿಸಿದರು. ಅವರು ಒಪ್ಪಿಕೊಂಡ ಕಾರಣ ಅವಇರನ್ನೂ ಕೂಡ ಮಾಹಿತಿ ಬಂದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ವಲ್ಪ ದೂರದಲ್ಲಿ ನಿಂತು ಕಾಯುತ್ತಿದ್ದಾಗ ಸಂಜೆ 6–00 ಗಂಟೆಯ ಹೊತ್ತಿಗೆ ಒಬ್ಬ ವ್ಯಕ್ತಿ ಒಂದು ಬಿಳಿ ಬಣ್ಣದ ಕೈಚೀಲವನ್ನು ಹಿಡಿದುಕೊಂಡು ಸಾವಜನಿಕರಿಗೆ ಮಾರಾಟ ಮಾಡುತ್ತಿರುವುದನ್ನು ಗಮನಿಸಿದೆವು. ಕೂಡಲೇ ಚಾಸ–1 ರವರು ಸಿಬ್ಬಂದಿಯೊಂದಿಗೆ ದಾಳಿ ಮಾಡಿದಾಗ ಸಾರ್ವಜನಿಕರು ಓಡಿಹೋಗಿರುತ್ತಾರೆ. ಸಿಕ್ಕ ವ್ಯಕ್ತಿಯ ಹೆಸರು,ವಿಳಾಸ ಕೇಳಿದಾಗ ತನ್ನಹೆಸರನ್ನು ಗಂಗಾಧರ ತಂದೆ ಯಲ್ಲಪ್ಪ ಎಂದು ತಿಳಿಸಿದರು. ಆತನ ಬಳಿ ಇದ್ದ ಚೀಲದಲ್ಲಿ ಒಟ್ಟು 90 ಎಂ.ಎಲ್ ನ 23 ಓಸಿ ವಿಸ್ಕಿ ಪೌಚುಗಳು ಮತ್ತು 90 ಎಂ.ಎಲ್ ನ 7 ಹೈವೆ ಡೀಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು ಇದ್ದವು. ಅದನ್ನು ಮಾರಾಟ ಮಾಡಲು ಆತನ ಬಳಿ ಯಾವುದೇ ಪರವಾನಗಿ ಇರಲಿಲ್ಲ. ನಂತರ ಚಾಸ–1 ರವರು ಚಾಸಾ–2 ಮತ್ತು ರ 3 ರವರ ಸಮಕ್ಷಮ ಸಂಜೆ 6–10 ರಿಂದ 7–00 ಗಂಟೆಯ ಮಧ್ಯದಲ್ಲಿ ಪಂಚನಾಮೆಯನ್ನು ಜರುಗಿಸಿ ಮದ್ಯವನ್ನು ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಂಡರು. ನಂತರ ಆರೋಪಿ ಮತ್ತು ಮುದ್ದೆಮಾಲುನೊಂದಿಗೆ

ಠಾಣೆಗೆ ಬಂದು ಚಾಸ–1 ರವರು ಸರ್ಕಾರದ ಪರವಾಗಿ ವರದಿಯನ್ನು ಚಾಸ–9 ರವರಿಗೆ ಕೊಟ್ಟರು. ಈ ಬಗ್ಗೆ ನಾನು ನನ್ನ ಹೇಳಿಕೆ ಕೊಟ್ಟಿರುತ್ತೇನೆ. ಮುದ್ದೆಮಾಲು–1 ನ್ನು ನೋಡಿ ಗುರುತಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ.ಡಿ.ಕೆ. ವಕೀಲರಿಂದಃ**

ಚಾಸ–1 ರವರು ಮೇಲೆ ಹೇಳಿದಂತೆ ನಮ್ಮ ಸಹಾಯದೊಂದಿಗೆ ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ–2 ಮತ್ತು 3 ಕೂಡ ನಮ್ಮ ಜೊತೆ ಯಾವುದೇ ದಾಳಿಗೆ ಬಂದಿಲ್ಲ ಮತ್ತು ಸ್ಥಳದಲ್ಲಿ ನಾವು ಯಾವುದೇ ಪಂಚನಾಮೆ ಬರೆದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಠಾಣೆಯಲ್ಲಿಯೇ ಕುಳಿತು ಬರೆಯಲಾಗಿದೆ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ಆತನ ವಿರುದ್ಧ ಸುಳ್ಳು ವರದಿಯನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಠಾಣೆಯ ಅಂಕಿ–ಸಂಖ್ಯೆ ಗೋಸ್ಕರ ಆರೋಪಿಯ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಹಿ/–

(ಮುಜಫರ್)

ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ

ತರೀಕೆರೆ